## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2012-13ನೇ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ಪುನರ್ವಿನಿಯೋಗದ ಮೂಲಕ ರಾಜ್ಯ ಸಹಾಯಧನ ಬಿಡುಗಡೆ ಕುರಿತು.

ಓದಲಾಗಿದೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 46 ಜೈಅಯೋ 2012, ಬೆಂಗಳೂರು, **ದಿನಾಂಕ** 22.03.2013

**ಪ್ರಸ್ತಾವನೆ :**

2012-13ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಆಯವ್ಯಯದಡಿ ನಿಗದಿಪಡಿಸಲಾದ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುದಾನ ಸೇರಿದಂತೆ ಒಟ್ಟಾರೆಯಾಗಿ ₹ 1495.20 ಲಕ್ಷಗಳ ಅನುದಾನದಲ್ಲಿ ಈಗಾಗಲೇ ₹ 1134.09 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಇನ್ನುಳಿದ ₹ 361.11 ಲಕ್ಷಗಳಲ್ಲಿ ₹ 27.18 ಲಕ್ಷಗಳನ್ನು ಬಳ್ಳಾರಿ ಜಿಲ್ಲಾ ಪಂಚಾಯತ್‌ನಲ್ಲಿ ಲಭ್ಯವಿರುವ ಅನುದಾನದಲ್ಲಿ ಅಗತ್ಯವಿರುವ ಅನುದಾನವನ್ನು ಮಾತ್ರ ಹಿಂಪಡೆದು ಪ್ರಸಕ್ತ ಸಾಲಿನಲ್ಲಿ ಪ್ರಗತಿ ಸಾಧಿಸಿ, ಅನುದಾನದ ಅಗತ್ಯತೆ ಹೊಂದಿರುವ ಶಿವಮೊಗ್ಗ, ರಾಮನಗರ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳಿಗೆ ಪುನರ್ವಿನಿಯೋಗದ ಮೂಲಕ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 46 ಜೈಅಯೋ 2012, ಬೆಂಗಳೂರು, ದಿನಾಂಕ 27.03.2013

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2012-13ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದ **ಲೆಕ್ಕ ಶೀರ್ಷಿಕೆ 2810-60-196-6-01(ಯೋಜನೆ)ಯಡಿ ₹ 27.10 ಲಕ್ಷಗಳನ್ನು** (ಇಪ್ಪತ್ತೇಳು ಲಕ್ಷದ ಹತ್ತು ಸಾವಿರಗಳು ಮಾತ್ರ) ಬಳ್ಳಾರಿ ಜಿಲ್ಲಾ ಪಂಚಾಯತ್‌ನಲ್ಲಿ ಲಭ್ಯವಿರುವ ಅನುದಾನದಿಂದ ಅಗತ್ಯವಿರುವ ಅನುದಾನವನ್ನು ಮಾತ್ರ ಹಿಂಪಡೆದು ಪ್ರಗತಿ ಸಾಧಿಸಿದ ಶಿವಮೊಗ್ಗ, ರಾಮನಗರ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳಿಗೆ ಪುನರ್ವಿನಿಯೋಗದ ಮೂಲಕ ಈ ಕೆಳಕಂಡಂತೆ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ

| ಕ್ರ.ಸಂ. | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಲಾದ ಅನುದಾನ ( ₹ ಲಕ್ಷಗಳಲ್ಲಿ) |
|---|---|---|
| 1 | ಶಿವಮೊಗ್ಗ | 3.97 |
| 2 | ರಾಮನಗರ | 2.38 |
| 3 | ಉಡುಪಿ | 20.75 |
| | **ಒಟ್ಟು** | **27.10** |

**ಹಾಲಿ ಪುನರ್ವಿನಿಯೋಗದ ಮೂಲಕ ಬಿಡುಗಡೆ ಮಾಡುತ್ತಿರುವ ಅನುದಾನವನ್ನು 2012-13ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ರಾಜ್ಯ ಸಹಾಯಧನ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.**

ಬಿಡುಗಡೆ ಮಾಡಿದ ಅನುದಾನವನ್ನು **ಲೆಕ್ಕ ಶೀರ್ಷಿಕೆ 2810-60-196-6-01ರಡಿ(ಯೋಜನೆ)** ವೆಚ್ಚ ಭರಿಸತಕ್ಕದ್ದು. ಸದರಿ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 152 ಪಿಬಿಎಸ್ 2013 ದಿನಾಂಕ 28.02.2012 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ, ಹಾಸನ, ರಾಮನಗರ ಮತ್ತು ಉಡುಪಿ
3. ಉಪಕಾರ್ಯದರ್ಶಿ(ಅಭಿವೃದ್ಧಿ)/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ, ಹಾಸನ, ರಾಮನಗರ ಮತ್ತು ಉಡುಪಿ
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
5. ಜಿಲ್ಲಾ ಖಜಾನಾಧಿಕಾರಿಗಳು, ಬಳ್ಳಾರಿ, ಹಾಸನ, ರಾಮನಗರ ಮತ್ತು ಉಡುಪಿ
6. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
7. ಖಜಾನೆಗಳ ಉಪನಿರ್ದೇಶಕರು, ಫೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು
8. ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ:49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜಭವನ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
10. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ